

بسم اللہِ الرّحمٰنِ الرّحیم

# ತಹ್‌ರೀಕ್ ಜದೀದ್ 81ನೇ ವರ್ಷದ ಘೋಷಣೆ: ಅಲ್ಲಾಹನು ಜನರ ಹೃದಯಗಳಲ್ಲಿ ಬಲಿದಾನ ನೀಡುವ ಮನೋಭಾವವನ್ನು ಈ ಕಾಲಘಟ್ಟದಲ್ಲಿಯೂ ಹೇಗೆ ಪ್ರೇರೇಪಿಸುತ್ತಾನೆಂದುದಕ್ಕಿರುವ ಉದಾಹರಣೆಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಪಂಚಮ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನ್‌ನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **07-11-2014** ರಂದು ನೀಡಿದ **ಜುಮುಅ ಖುತುಬದ ಸಾರಾಂಶ**)

*(ತಶಹ್ಹುದ್, ತಅವ್ವುಝ್, ಸೂರತುಲ್ ಫಾತಿಹಾ ತಿಲಾವತ್ ಮಾಡಿದ ನಂತರ)* **ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:**

لَنْ تَنَالُوا الْبِرَّ حَتَّى تُنْفِقُوا مِمَّا تُحِبُّونَ وَمَا تُنْفِقُوا مِنْ شَيْءٍ فَإِنَّ اللَّهَ بِهِ عَلِيمٌ

*ಲನ್ ತನಾಲುಲ್ ಬಿರ್‍ರ ಹತ್ತಾ ತುನ್‌ಫಿಖೂ ಮಿಮ್ಮಾ ತುಹಿಬ್ಬೂನ್ ವಮಾ ತುನ್‌ಫಿಖೂ ಮಿನ್ ಶೈಯಿನ್ ಫ ಇನ್ನಲ್ಲಾಹ ಬಿಹೀ ಅಲೀಮ್.*

**"ನಿಮಗೆ ಪ್ರಿಯವಾದವುಗಳಿಂದ (ದೇವ ಮಾರ್ಗದಲ್ಲಿ) ವ್ಯಯಿಸುವ ವರೆಗೆ ನೀವು (ಪರಿಪೂರ್ಣ) ಒಳಿತನ್ನು ಗಳಿಸಲಾರಿರಿ. ನೀವು ಖರ್ಚು ಮಾಡುವುದನ್ನೆಲ್ಲ ಅಲ್ಲಾಹನು ಚೆನ್ನಾಗಿ ಬಲ್ಲನು."**(ಪವಿತ್ರ ಖುರ್‌ಆನ್, 3: 93)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಈ ವಿಷಯದ ಬಗ್ಗೆ ವಿಶದೀಕರಿಸುತ್ತಾ ಹೀಗೆ ಹೇಳಿದ್ದಾರೆ: ಲೋಕದಲ್ಲಿ ಮನುಷ್ಯನು ಸಂಪತ್ತನ್ನು ಬಹಳ ಹೆಚ್ಚು ಪ್ರೀತಿಸುತ್ತಾನೆ. ಇದೇ ಕಾರಣದಿಂದ ಸ್ವಪ್ನ ವ್ಯಾಖ್ಯಾನ ಗ್ರಂಥಗಳಲ್ಲಿ ಹೀಗೆ ಬರೆಯಲಾಗಿದೆ– ಒಬ್ಬನು ಸ್ವಪ್ನದಲ್ಲಿ ತನ್ನ ಯಕೃತನ್ನು ಯಾರಿಗಾದರೂ ಕೊಡುವುದಾಗಿ ಕಂಡರೆ ಅದರ ಅರ್ಥ ಸಂಪತ್ತನ್ನು ಕೊಡುವನು ಎಂದಾಗಿದೆ. ಇದೇ ಕಾರಣದಿಂದ ವಾಸ್ತವಿಕ **ತಖ್ವ** ಗಳಿಸಲು, ಸತ್ಯವಿಶ್ವಾಸಿಯಾಗಲು ಅಲ್ಲಾಹನು لَنْ تَنَالُوا الْبِرَّ حَتَّى تُنْفِقُوا مِمَّا تُحِبُّونَ *'ಲನ್ ತನಾಲುಲ್ ಬಿರ್‍ರ ಹತ್ತಾ ತುನ್‌ಫಿಖೂ ಮಿಮ್ಮಾ ತುಹಿಬ್ಬೂನ್'* **"ನಿಮಗೆ ಪ್ರಿಯವಾದವುಗಳಿಂದ (ದೇವ ಮಾರ್ಗದಲ್ಲಿ) ವ್ಯಯಿಸುವ ವರೆಗೆ ನೀವು (ಪರಿಪೂರ್ಣ) ಒಳಿತನ್ನು ಗಳಿಸಲಾರಿರಿ"** ಎಂದು ಹೇಳಿರುವನು. ಅಲ್ಲಾಹನ ಸೃಷ್ಟಿಗಳೊಂದಿಗೆ ಸಹಾನುಭೂತಿ ಮತ್ತು ಉತ್ತಮ ವರ್ತನೆಯ ಬಹಳ ದೊಡ್ಡ ಭಾಗ ಅವರಿಗೋಸ್ಕರ ಸಂಪತ್ತನ್ನು ಖರ್ಚು ಮಾಡುವುದರ ಆವಶ್ಯಕತೆಯನ್ನು ಸೂಚಿಸುತ್ತದೆ. ನಮ್ಮ ಸಹಜೀವಿಗಳೊಂದಿಗೆ ಮತ್ತು ಅಲ್ಲಾಹನ ಸೃಷ್ಟಿಗಳೊಂದಿಗೆ ಸಹಾನುಭೂತಿ ಹೊಂದುವುದು ಸತ್ಯವಿಶ್ವಾಸದ ಇನ್ನೊಂದು ಭಾಗವಾಗಿದೆ. ಅದಿಲ್ಲದಿದ್ದರೆ ಸತ್ಯವಿಶ್ವಾಸ ಪರಿಪೂರ್ಣವೂ ದೃಢವೂ ಆಗಲಾರದು. ಮನುಷ್ಯನು ತ್ಯಾಗ ಮಾಡದೆ ಅನ್ಯರಿಗೆ ಹೇಗೆ ತಾನೆ ಲಾಭವನ್ನುಂಟುಮಾಡಲು ಸಾಧ್ಯ. ಅನ್ಯರಿಗೆ ಲಾಭ ನೀಡಲು ಮತ್ತು ಅವರೊಂದಿಗೆ ಸಹಾನುಭೂತಿ ಹೊಂದಲು ಆವಶ್ಯಕವಾದುದು ತ್ಯಾಗವಾಗಿದೆ. لَنْ تَنَالُوا الْبِرَّ حَتَّى تُنْفِقُوا مِمَّا تُحِبُّونَ **'ಲನ್ ತನಾಲುಲ್ ಬಿರ್‍ರ ಹತ್ತಾ ತುನ್‌ಫಿಖೂ ಮಿಮ್ಮಾ ತುಹಿಬ್ಬೂನ್'** ಎಂಬ ಪವಿತ್ರ ಖುರ್‌ಆನ್ ವಚನದಲ್ಲಿ ತ್ಯಾಗದ ಬಗ್ಗೆ ಉಪದೇಶಗಳನ್ನೂ ಮಾರ್ಗದರ್ಶನವನ್ನೂ ನೀಡಲಾಗಿದೆ.

ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುವುದು ಮನುಷ್ಯನ ಸಾತ್ವಿಕತೆ ಮತ್ತು ತಖ್ವದ ಮಟ್ಟವನ್ನು ಸೂಚಿಸುವುದಾಗಿರುತ್ತದೆ. ಅದು ಅವನು ಬೀರುವ ಸುವಾಸನೆ ಆಗಿದೆ. ಹಝ್ರತ್ ಅಬೂಬಕರ್ ರಝಿಯಲ್ಲಾಹು ಅನ್‌ಹುರವರ ಅಲ್ಲಾಹನಿಗೋಸ್ಕರ ಖರ್ಚು ಮಾಡುವ ಮಟ್ಟ ಹೇಗಿತ್ತೆಂದರೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಒಂದು ಆವಶ್ಯಕತೆ ಬಗ್ಗೆ ಸೂಚಿಸಿದಾಗ ಅವರು ಮನೆಯಲ್ಲಿದ್ದ ಎಲ್ಲಾ ವಸ್ತುಗಳನ್ನು ತೆಗೆದುಕೊಂಡು ಬಂದರು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬುವ ಭಾಗ್ಯ ಅಲ್ಲಾಹನು ನಮಗೆ ನೀಡಿರುವನು. ಅವರು ನಮ್ಮ ನಂಬಿಕೆಗಳನ್ನು ಮತ್ತು ನಡೆನುಡಿಗಳನ್ನು ಅಲ್ಲಾಹನ ಆಜ್ಞೆಗಳ ಪ್ರಕಾರ ಮತ್ತು ಅವನು ನೀಡಿದ ಉಪದೇಶಗಳ ಪ್ರಕಾರ ಪರಿಷ್ಕರಿಸಿದರು. ಆಧ್ಯಾತ್ಮಿಕ ಪ್ರಗತಿಗಳಿಸಲು ಮತ್ತು ಆತ್ಮ ಶುದ್ದೀಕರಣ ಮಾಡಲು ಪವಿತ್ರ ಖುರ್‌ಆನಿನ ಉಪದೇಶಗಳ ಪ್ರಕಾರ ಮಾರ್ಗದರ್ಶನ ನೀಡಿದರು. **ಹುಖೂಖುಲ್ಲಾಹ್**(ಅಲ್ಲಾಹನ ಹಕ್ಕುಗಳ) ಬಗ್ಗೆಯೂ **ಹುಖೂಖುಲ್ ಇಬಾದ್**(ಅಲ್ಲಾಹನ ದಾಸರ ಹಕ್ಕುಗಳ) ಬಗ್ಗೆಯೂ ನಮ್ಮ ಗಮನವನ್ನು ಸೆಳೆದರು. ಜೀವ, ಸಂಪತ್ತು ಸಮಯ ಮತ್ತು ಸಂತಾನವನ್ನು ಅಲ್ಲಾಹನ ಸಂಪ್ರೀತಿ ಗಳಿಸಲು ಬಲಿದಾನವಾಗಿ ನೀಡುವ ಮನೋಭಾವವನ್ನು ಸೃಷ್ಟಿಸಿದರು. ಅಹ್ಮದಿಯಾ ಜಮಾಅತಿನ ಪ್ರತಿಯೊಬ್ಬ ವ್ಯಕ್ತಿ ತನ್ನ ಸ್ಥಿತಿಯನ್ನು ಪರಿಪೂರ್ಣವಾಗಿ ಅಲ್ಲಾಹನ ಉಪದೇಶಗಳ ಪ್ರಕಾರ ಪರಿವರ್ತಿಸಬೇಕೆಂದು ಅವರು ಬಯಸಿದರು. ಆಗ ಮಾತ್ರ ಒಬ್ಬನು ವಾಸ್ತವಿಕ ಅಹ್ಮದಿ ಆಗುವನು. ಆದುದರಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಪ್ರತೀಕ್ಷೆ ಮತ್ತು ಇಚ್ಛೆಗೆ ಅನುಸಾರವಾಗಿ ನಮ್ಮ ಜೀವಿತವನ್ನು ಪರಿವರ್ತಿಸಲು ನಾವು ಪ್ರಯತ್ನ ಮಾಡಬೇಕಾದುದು ಆವಶ್ಯಕವಾಗಿದೆ. ಈ ವಿವರಣೆಗಳು ನಾನು ಖುತುಬದ ಆರಂಭದಲ್ಲಿ ತಿಲಾವತ್ ಮಾಡಿದ ವಚನವನ್ನು ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನೀಡಿದ ಉಪದೇಶಗಳಾಗಿವೆ.

ಆಧ್ಯಾತ್ಮಿಕ ಪ್ರಗತಿಗೋಸ್ಕರ ಒಬ್ಬ ಸತ್ಯವಿಶ್ವಾಸಿ ಈಡೇರಿಸಬೇಕಾದ ಹೊಣೆಗಾರಿಕೆಗಳನ್ನು ನಾನು ತಿಲಾವತ್ ಮಾಡಿದ ವಚನದಲ್ಲಿ ಅಲ್ಲಾಹನು ವಿವರಿಸಿರುವನು. ಅವುಗಳಲ್ಲಿ ಒಂದು ಸಂಪತ್ತಿನ ಬಲಿದಾನವಾಗಿದೆ. ಈ ವಿಷಯ ಬಹಳ ವಿಸ್ತಾರವಾಗಿ ವಿವರಿಸಬೇಕಾಗಿದೆ. ಆದರೆ ಈಗ ಹಣಕಾಸಿನ ತ್ಯಾಗದ ಬಗ್ಗೆ ಮಾತ್ರ ಹೇಳುವೆನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್

ಹೇಳಿದ ಹಾಗೆ **ಹುಖೂಖುಲ್ಲಾಹ್** ಮತ್ತು **ಹುಖೂಖುಲ್ ಇಬಾದ್** ಇವುಗಳನ್ನು ಈಡೇರಿಸುವ ಬಹಳ ದೊಡ್ಡ ಮಾರ್ಗ ಸಂಪತ್ತಿನ ತ್ಯಾಗವಾಗಿದೆ. ಅಲ್ಲಾಹನ ದಾಸರ ಹಕ್ಕುಗಳನ್ನು ಈಡೇರಿಸಲು ಮತ್ತು ಇಸ್ಲಾಮ್ ಧರ್ಮ ಪ್ರಚಾರ ಮಾಡುವ ಕೆಲಸವನ್ನು ಈಡೇರಿಸಲು ಸಂಪತ್ತಿನ ತ್ಯಾಗ ಆವಶ್ಯಕವಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದುದರ ಸಾರಾಂಶ ಇದೇ ಆಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕಾಲದಲ್ಲಿ ಈ ಕೆಲಸ ಅತ್ಯಂತ ಉನ್ನತಿಯನ್ನು ತಲಪಿದ್ದಿತು. ಇಂದಿನ ಕಾಲದಲ್ಲಿ ಈ ಕೆಲಸವನ್ನು ಪೂರ್ಣ ರೂಪದಲ್ಲಿ ಈಡೇರಿಸಲು ಭಾಗವಹಿಸುವ ಭಾಗ್ಯಶಾಲಿಗಳು ಅಹ್ಮದಿಯರಾದ ನಾವಾಗಿದ್ದೇವೆ. ಅಲ್ಲಾಹನ ಸಂಪ್ರೀತಿ ಗಳಿಸಲು ನಾವು ಹೀಗೆ ಮಾಡುತ್ತಿದ್ದೇವೆ. ಇಂದಿನ ಕಾಲದಲ್ಲಿ ಲೌಕಿಕ ಸಂಪತ್ತನ್ನು ಗಳಿಸಲು ಲೋಕದ ಜನರು ಏನೇನೆಲ್ಲಾ ಮಾಡುತ್ತಿದ್ದಾರೆ. ಆದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಉಪದೇಶ ಮತ್ತು ತರಬೇತಿಗೆ ಪಾತ್ರರಾದ ಅಹ್ಮದಿಯರಲ್ಲಿ ಬಹುತೇಕ ಜನರು ಅಲ್ಲಾಹನ ಪ್ರೀತಿಯನ್ನು ಗಳಿಸಲು, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಸ್ಥಾಪಿಸಿದ ಇಸ್ಲಾಮ್ ಧರ್ಮದ ಪ್ರಚಾರಕ್ಕೋಸ್ಕರ ತಮಗೆ ಪ್ರಿಯಕರವಾದ ಸಂಪತ್ತನ್ನು ಖರ್ಚು ಮಾಡುತ್ತಾ ಇದ್ದಾರೆ. ಯಾವುದಾದರೂ ಕಾರಣದಿಂದ ಎಂದಾದರೂ ತಾವು ಮಾಡುವ ಖರ್ಚು ಕಡಿಮೆಯಾಯಿತೆಂದಾದರೆ, ಅವರು ಚಿಂತಾಮಗ್ನರಾಗುತ್ತಾರೆ ಮತ್ತು ಅಳುತ್ತಾರೆ. ಇದು ಅಹ್ಮದಿಯಾ ಜಮಾಅತಿನ ಜನರ ಮನೋಭಾವವಾಗಿದೆ.

ಸಂಪತ್ತಿನ ಬಲಿದಾನದ ಮಹತ್ವವೇನು? ಅದರಿಂದ ಏನೆಲ್ಲಾ ಕೆಲಸಗಳನ್ನು ಮಾಡಲಾಗುತ್ತಿದೆ? ಈ ವಿಷಯಗಳು ಜನರಿಗೆ ಸ್ಪಷ್ಟವಾಗಿ ಮನವರಿಕೆಯಾದರೆ ಅವರು ಯಾವಾಗಲೂ ಬಲಿದಾನ ಮಾಡಲು ಸಿದ್ಧರಾಗಿರುತ್ತಾರೆ. ಏನಾದರೂ ಬಲಹೀನತೆ ಇದ್ದರೆ ಅದು ಜಮಾಅತಿನ ಆಡಳಿತೆಯ ವ್ಯವಸ್ಥೆಯಲ್ಲಾಗಿರುತ್ತದೆ. ಅಲ್ಲಾಹನ ಅನುಗ್ರಹದಿಂದ ಅಹ್ಮದಿಯರು ಹೊಂದಿರುವ ಸತ್ಯವಿಶ್ವಾಸದಲ್ಲಿ ಯಾವುದೇ ಬಲಹೀನತೆ ಇರುವುದಿಲ್ಲ.

ಈಗ ನಾನು ಕೆಲವು ಘಟನೆಗಳನ್ನು ವಿವರಿಸುವೆನು. ಅಲ್ಲಾಹನು ಜನರ ಹೃದಯಗಳಲ್ಲಿ ಬಲಿದಾನ ನೀಡುವ ಮನೋಭಾವವನ್ನು ಈ ಕಾಲಘಟ್ಟದಲ್ಲಿಯೂ ಹೇಗೆ ಪ್ರೇರೇಪಿಸುತ್ತಾನೆಂದು ನೋಡಿರಿ.

ಬೆನಿನ್ ದೇಶದ ಅಮೀರ್ ಸಾಹೇಬರು ಬರೆಯುತ್ತಾರೆ: ಪೋರ್ಟೋನೋವೋ ನಗರದ ಒಬ್ಬ ಪ್ರಸಿದ್ಧ ಅಹ್ಮದಿ ಮಶ್‌ಹೂದಿ ಸಾಹೇಬರು ಒಂದು ಸಾವಿರ ಪೌಂಡ್ ಚಂದ ನೀಡಿದರು. ಆಫ್ರಿಕದ ದೇಶಗಳಲ್ಲಿ ಇಷ್ಟು ದೊಡ್ಡ ತ್ಯಾಗ ಮಾಡುವುದು ಬಹಳ ದೊಡ್ಡ ವಿಶೇಷವಾಗಿದೆ. ಅವರೊಂದಿಗೆ ಮುಬಲ್ಲಿಗ್ ಹೇಳಿದರು– ನೀವು ಇಷ್ಟು ಚಂದ ಕೊಡುತ್ತಿದ್ದೀರಿ. ವಕ್‌ಫೇ ಜದೀದ್ ಚಂದ ಕೊಡಲಿಕ್ಕಿದೆ. ಬೇರೆ ಚಂದಗಳೂ ಇವೆ. ಆಗ ಮಶ್‌ಹೂದಿ ಸಾಹೇಬರು ಹೇಳಿದರು: ಬೇರೆ ಚಂದಗಳು ಇವೆ ಎಂದು ಗೊತ್ತಿದೆ. ಆದರೆ ನಾನು ನನ್ನ ಈ ಚಂದವನ್ನು ಕಡಿಮೆಗೊಳಿಸಲಾರೆ. ಅಲ್ಲಾಹನು ಅವುಗಳಿಗೋಸ್ಕರ ನನಗೆ ಬೇರೆ ಮಾರ್ಗವನ್ನು ತೆರೆಯುವನು ಎಂದು ಹೇಳಿದರು. ಅಲ್ಲಿನ ಜನರ ಮನೋಭಾವ ಹೀಗೆ ಆಗುತ್ತಾ ಇದೆ.

ಬೆನಿನ್ ದೇಶದ ನಮ್ಮ ಮುಬಲ್ಲಿಗ್ ಸಾಹೇಬ್ ಹೀಗೆ ಬರೆಯುತ್ತಾರೆ: ಸಾವೇ ರೀಜನ್‌ಗೆ ಸೇರಿದ ಪೀಲ್ ಎಂಬಲ್ಲಿ ನವ ಅಹ್ಮದಿಯರಿಗೆ ತರಬೇತಿ ಜಲ್ಸ ಜರಗಿಸಲಾಗಿತ್ತು. ಅದರಲ್ಲಿ ತಹ್‌ರೀಕ್ ಜದೀದ್‌ಗೆ ಸಂಬಂಧಿಸಿದ ಚರಿತ್ರೆ ವಿವರಿಸಲಾಗಿತ್ತು. ಸಂಪತ್ತಿನ ತ್ಯಾಗದ ಬಗ್ಗೆ ಒತ್ತಿ ಹೇಳಲಾಯಿತು. ಸಭೆ ಮುಕ್ತಾಯಗೊಂಡ ನಂತರ ಜನರು ಚಂದ ಬರೆಸಲು ತೊಡಗಿದರು. ಒಬ್ಬ ಅಹ್ಮದಿ ಹೇಳಿದರು: ನನ್ನ ಹತ್ತಿರ ಹಣವಿಲ್ಲ ಆದರೆ ಚಂದ ನೀಡುವ ಇಚ್ಛೆ ಇದೆ. ಆಗ ಅಲ್ಲಿನ ಸ್ಥಳೀಯ ಮುಬಲ್ಲಿಗ್ ಹೇಳಿದರು: ನಿಮಗೆ ಎಷ್ಟು ಸಾಧ್ಯವಿದೆಯೋ ಅಷ್ಟು ಚಂದ ನೀಡಬಹುದು. ಆ ಬಡ ಅಹ್ಮದಿ ಮನೆಗೆ ಹೋಗಿ ಎರಡು ಕೋಳಿಮೊಟ್ಟೆ ತಂದರು. "ನನ್ನ ಹತ್ತಿರ ಈಗ ಇದು ಮಾತ್ರ ಇದೆ" ಎಂದು ಹೇಳಿದರು. ಅಲ್ಲಾಹನ ದೃಷ್ಟಿಯಲ್ಲಿ ಯಾವುದೇ ಬಲಿದಾನ ಚಿಕ್ಕದಾಗಿರುವುದಿಲ್ಲ ಎಂದು ಆ ಅಹ್ಮದಿಯೊಂದಿಗೆ ಹೇಳಲಾಯಿತು. ಸಂಕಲ್ಪ ಒಳ್ಳೆಯದಾಗಿರಬೇಕು ಅದೇ ಮುಖ್ಯವಾದುದು.

ಮಾಲಿ ದೇಶದಿಂದ ಬಂದ ಒಂದು ವರದಿಯಲ್ಲಿರುವ ವಿವರಣೆ ಹೀಗಿದೆ. ಒಬ್ಬ ಹಳೆಯ ಅಹ್ಮದಿ ಅಬೂಬಕರ್ ಜಾದ ಎಂಬವರು ಯಾವುದೋ ಕಾರಣದಿಂದ ಚಂದ ಕೊಡುವುದನ್ನು ನಿಲ್ಲಿಸಿದ್ದರು. ಜಮಾಅತಿನ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದನ್ನು ಬಿಟ್ಟು ಬಿಡಲು ತೊಡಗಿದರು. ಅವರಿಗೆ ಧಾರಾಳ ಉಪದೇಶ ನೀಡಿದರೂ ಪ್ರಯೋಜನವಾಗಲಿಲ್ಲ. ಸ್ವಲ್ಪ ಕಾಲದ ನಂತರ ಒಂದು ದಿನ ಅವರು ನಮ್ಮ ಮಿಶನ್ ಹೌಸಿಗೆ ಬಂದು ತನ್ನ ಬಾಕಿಯಾದ ಎಲ್ಲಾ ಚಂದ ನೀಡಿದರು. ಅವರು ಹೇಳಿದರು: ರಾತ್ರಿ ನಾನೊಂದು ಸ್ವಪ್ನ ಕಂಡೆನು. ನಾನು ಆಳವಾದ ನೀರಿನಲ್ಲಿ ಮುಳುಗಿ ಹೋಗುತ್ತಿದ್ದೆ. ನನಗೆ ಸಹಾಯಕ್ಕೆ ಯಾರೂ ಬರುತ್ತಾ ಇಲ್ಲ. ಆಗ ಒಂದು ನೌಕೆ ಕಾಣಿಸಿತು. ಅದರಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಆಸೀನರಾಗಿದ್ದರು. ಹುಝೂರ್ ಅಲೈಹಿಸ್ಸಲಾಮರು ನನ್ನ ಕೈ ಹಿಡಿದು ಎತ್ತಿ ತನ್ನ ಸಮೀಪ ಕುಳ್ಳಿರಿಸಿದರು ಮತ್ತು ಹೇಳಿದರು– "ಇನ್ನು ಮುಂದೆ ಚಂದ ನೀಡುವ ಬಗ್ಗೆ ಉದಾಸೀನನಾಗಬೇಡ."

ಈ ಸ್ವಪ್ನ ಕಂಡ ನಂತರ ಅಬೂಬಕರ್ ಸಾಹೇಬರು ಇನ್ನು ಮುಂದೆ ಚಂದ ನೀಡುವುದರಲ್ಲಿ ಉದಾಸೀನನಾಗಲಾರೆ ಮತ್ತು ಜಮಾಅತಿನ ಕಾರ್ಯಗಳಲ್ಲಿ ನಿರ್ಲಕ್ಷ್ಯತೆ ಹೊಂದಲಾರೆನೆಂದು ದೃಢ ವಾಗ್ದಾನ ಮಾಡಿದರು.

ಮೇಲೆ ವಿವರಿಸಿದ ಸ್ವಪ್ನ ಚಂದದ ಮಹತ್ವದ ಬಗ್ಗೆ ಒಂದು ಸಾಕ್ಷ್ಯಾಧಾರ ಮಾತ್ರವಲ್ಲ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸತ್ಯತೆಗೂ ಒಂದು ಸಾಕ್ಷ್ಯಾಧಾರವಾಗಿದೆ. ಬಹಳ ದೂರದ ಒಂದು ದೇಶದಲ್ಲಿ ದೂರದ ಪ್ರದೇಶದಲ್ಲಿ ಒಬ್ಬ ವ್ಯಕ್ತಿ ಅಹ್ಮದಿಯ್ಯತ್ತನ್ನು

ಅಂಗೀಕರಿಸುತ್ತಾನೆ. ಅನಂತರ ಅದರಿಂದ ಹಿಂದೆ ಸರಿಯುತ್ತಾನೆ. ಅನಂತರ ಆ ವ್ಯಕ್ತಿಗೆ ಸ್ವಪ್ನದ ಮೂಲಕ ಸರಿಯಾದ ಮಾರ್ಗದರ್ಶನ ನೀಡಲಾಗುತ್ತದೆ.

ಟಾನ್‌ಝಾನಿಯ ದೇಶದ ದಾರುಸ್ಸಲಾಮ್ ನಗರದ ಈಸಾ ಸಾಹೇಬ್ ಎಂಬ ಅಹ್ಮದಿ ಹೀಗೆ ಹೇಳುತ್ತಾರೆ: ಅವರು 1990ರ ದಶಕದಲ್ಲಿ ಅಹ್ಮದಿಯರಾದರು. ಅವರು ಕ್ರೈಸ್ತ ಧರ್ಮದಿಂದ ಅಹ್ಮದಿಯಾ ಜಮಾಅತಿಗೆ ಪ್ರವೇಶಿಸಿದ್ದರು. ಅವರು ದೃಢ ವಿಶ್ವಾಸಿಯಾಗಿದ್ದಾರೆ. ಮೂಸೀ ಸಹ ಆಗಿದ್ದಾರೆ. ಅವರು ತಮ್ಮ ವಾಗ್ದಾನಗಳಿಗಿಂತ ಹೆಚ್ಚು ಚಂದ ತನ್ನ ಪರವಾಗಿ ಮತ್ತು ತನ್ನ ಕುಟುಂಬದ ಪರವಾಗಿ ಕೊಡುತ್ತಿದ್ದಾರೆ. ಅವರು ಜಮಾಅತಿನ ಉಪದೇಶಗಳನ್ನೂ ಪಾಲಿಸುವುದರಲ್ಲಿ ಹಳೆಯ ಅಹ್ಮದಿಯರಿಗಿಂತಲೂ ಮುಂದೆ ಇದ್ದಾರೆ. ಈಗ ಅವರು ದಾರುಸ್ಸಲಾಮಿನ ರೀಜನಲ್ ಪ್ರೆಸಿಡೆಂಟ್ ಆಗಿದ್ದಾರೆ. ಅಲ್ಲಾಹನ ಮಾರ್ಗದಲ್ಲಿ ಸಂಪತ್ತನ್ನು ಬಲಿದಾನವಾಗಿ ನೀಡಲು ಪ್ರಾರಂಭಿಸಿದಾಗ ಅಲ್ಲಾಹನು ನನಗೆ ಬಹಳ ಅನುಗ್ರಹ ನೀಡಿದನು ಎಂದು ಅವರು ಹೇಳುತ್ತಾರೆ.

ಅಲಾಡ ರೀಜನ್ ಪ್ರದೇಶದ ಮುಬಲ್ಲಿಗ್ ಹೀಗೆ ಬರೆಯುತ್ತಾರೆ: ನಾನು ಸೋಯೋ ಜಮಾಅತನ್ನು ಸಂದರ್ಶಿಸಿದಾಗ ರಾಶಿದ ಎಂಬ ಏಳು ವರ್ಷ ಪ್ರಾಯದ ಓರ್ವ ಹುಡುಗಿ ಟೊಮೋಟೋ, ಮೆಣಸು ಮತ್ತು ಮಾಲ್‌ಟಾ ಹಣ್ಣು ತಂದು ಹೇಳಿದಳು. ಇವು ತಹ್‌ರೀಕ್ ಜದೀದ್ ಚಂದಕ್ಕೆ ನಾನು ತಂದಿರುವೆನು.

ನೀವು ನೋಡಿರಿ ಮಕ್ಕಳ ಹೃದಯಗಳಲ್ಲೂ ಅಲ್ಲಾಹನು ಹೇಗೆ ಪ್ರೇರೇಪಣೆ ನೀಡುತ್ತಾನೆಂದು. ಅಲ್ಲಿನ ಸದರ್ ಸಾಹೇಬರು ಹೇಳುತ್ತಾರೆ: ಆ ಹುಡುಗಿ ಪ್ರತಿ ತಿಂಗಳು ಚಂದ ಕೊಡುತ್ತಾರೆ. ಅವಳ ತಾಯಿ ಚಂದದ ಹಣ ಕೊಡದಿದ್ದರೆ ಆ ಹುಡುಗಿ ಅಳುತ್ತಾಳೆ.

ನೈಜೀರಿಯಾದ ಒಂದು ಜಮಾಅತಿನ ಅಧ್ಯಕ್ಷರು ಹೀಗೆ ಬರೆಯುತ್ತಾರೆ: ನಾನು ಸ್ವಲ್ಪ ಕಾಲ ಆರ್ಥಿಕ ಸಂಕಷ್ಟಕ್ಕೊಳಗಾಗಿದ್ದೆ. ಆ ಕಾರಣದಿಂದ ನಾನು ಬಹಳ ಬೇಸರಗೊಂಡಿದ್ದೆ. ನನಗೊಂದು ದಿನ ಹೀಗೆ ಯೋಚನೆ ಹೊಳೆಯಿತು– ನಾನು ಮೂರು ತಿಂಗಳಿಂದ ಚಂದ ಕೊಟ್ಟಿಲ್ಲ. ಇದೇ ಕಾರಣದಿಂದ ನನಗೆ ಕಷ್ಟ ಬಂದಿರಬಹುದು ಎಂದು. ನಾನು ಆ ಮೂರು ತಿಂಗಳ ನಂತರ ನಾಲ್ಕು ಸಾವಿರ ನಾಯಿರ ಚಂದ ನೀಡಿದೆ. ಆಗ ಏನು ಸಂಭವಿಸಿತೆಂದರೆ, ನಾನು ಒಂದು ಜಮೀನಿನ ಮಾರಾಟದಲ್ಲಿ ಎಂಟು ಲಕ್ಷ ನಾಯಿರ ಲಾಭ ಗಳಿಸುವಂತೆ ಅಲ್ಲಾಹನು ಅನುಗ್ರಹಿಸಿದನು. ನನ್ನ ವಿಶ್ವಾಸ ವರ್ಧಿಸಿತಲ್ಲದೆ ಅಲ್ಲಾಹನು ತನ್ನ ವಾಗ್ದಾನಗಳನ್ನು ಪಾಲಿಸುತ್ತಾನೆಂದು ತಿಳಿಯಿತು. ಅವನ ಮಾರ್ಗದಲ್ಲಿ ಬಲಿದಾನ ಮಾಡಿದರೆ ಅವನು ಹಲವು ಪಟ್ಟು ಪ್ರತಿಫಲ ನೀಡುತ್ತಾನೆ. ಈಗ ಅವರು ಮಸ್‌ಜಿದ್ ಮತ್ತು ಮಿಶನ್ ಹೌಸ್ ನಿರ್ಮಾಣಕ್ಕಾಗಿ ನಗರದಲ್ಲಿ ಬಹಳ ದೊಡ್ಡದಾದೊಂದು ನಿವೇಶನ ಖರೀದಿಸಿ ನೀಡಿರುವರು.

ಟೆನ್‌ಝಾನಿಯಾದ ಒಬ್ಬ ಅಹ್ಮದಿ ಮಾರೋಂಡಾ ಸಾಹೇಬ್ ಬರೆಯುತ್ತಾರೆ: ನಾನು ಮೆಟ್ರಿಕ್ ತನಕ ಕಲಿತಿರುವೆನು. ನಾನು ನಿರುದ್ಯೋಗಿಯಾಗಿದ್ದೆ. ಒಂದು ಗ್ಯಾಸ್ ಕಂಪನಿಯಲ್ಲಿ ಸೆಕ್ಯುರಿಟಿ ಗಾರ್ಡ್ ಕೆಲಸ ಲಭಿಸಿತು. ಐವತ್ತಾರು ಸಾವಿರ ಶಿಲ್ಲಿಂಗ್ ಸಂಬಳ ಲಭಿಸಿತು. ಆಗ ನಾನು ಜಮಾಅತಿನ ನಿಯಮ ಪ್ರಕಾರ ಚಂದ ಕೊಡುವೆನೆಂದೂ ನನಗೆ ಎಷ್ಟು ಕಷ್ಟವಾದರೂ ನಿಶ್ಚಿತ ದರದಲ್ಲಿಯೇ ಚಂದ ಕೊಡುವೆನು ಎಂದೂ ತೀರ್ಮಾನಿಸಿದೆ. ಆ ಪ್ರಕಾರ ನಾನು ವರ್ತಿಸಿದೆ. ನಾನು ಮಾಡಿದ ಸಾಂಪತ್ತಿಕ ತ್ಯಾಗದ ಕಾರಣ ಈಗ ಗ್ಯಾಸ್ ಕಂಪೆನಿಯಲ್ಲಿ ಸೀನಿಯರ್ ಫೀಲ್ಡ್ ಗ್ಯಾಸ್ ಆಪರೇಟರ್ ಎಂಬ ಹುದ್ದೆಯಲ್ಲಿದ್ದೇನೆ. ಈಗ ನನಗೆ ಒಂದೂವರೆ ಮಿಲಿಯನ್ ಶಿಲ್ಲಿಂಗ್ ಸಂಬಳವಿದೆ. ನನ್ನ ವಿದ್ಯಾಭ್ಯಾಸ ಹತ್ತನೆ ಕ್ಲಾಸ್ ತನಕವಾದ ಕಾರಣ ಕಂಪೆನಿಯ ನಿಯಮಗಳ ಪ್ರಕಾರ ಸಹ ನಾನು ಈ ಹುದ್ದೆಗೆ ಅರ್ಹನಾಗಿರಲಿಲ್ಲ. ಆದರೆ ನಾನು ನಿಶ್ಚಿತ ದರದಲ್ಲಿ ಚಂದ ನೀಡಿದ ಕಾರಣ ಅಲ್ಲಾಹನಿಂದ ನನಗೆ ಈ ಅನುಗ್ರಹ ಲಭಿಸಿತು. ಈಗ ಸಹ ನಾನು ಜಮಾಅತಿನ ನಿಯಮ ಪ್ರಕಾರ ಚಂದ ಕೊಡುತ್ತಿದ್ದೇನೆ.

ಈ ಜನರು ಅತ್ಯಂತ ನಿಷ್ಠಾವಂತರಾಗಿದ್ದಾರೆ. ಅವರು وَأَنفِقُوا خَيۡرًا لِّأَنفُسِكُمۡ '*ವ ಅನ್‌ಫಿಖೂ ಖೈರನ್‌ಲಿ ಅನ್‌ಫುಸಿಖುಮ್*' – **"ನೀವು ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡಿರಿ. ಅದು ನಿಮ್ಮ ಜೀವಕ್ಕೆ ಹಿತಕರವಾಗುವುದು"** ಎಂಬ ವಿಷಯವನ್ನು ಚೆನ್ನಾಗಿ ಮನವರಿಕೆ ಮಾಡಿದವರಾಗಿದ್ದಾರೆ. ಅವರು ಈ ರಹಸ್ಯವನ್ನು ಬಲ್ಲವರಾಗಿದ್ದಾರೆ. ಅವರಿಗೆ ಅಲ್ಲಾಹನು ಅನುಗ್ರಹ ನೀಡುತ್ತಾನೆ.

ಹಿಂದೂಸ್ಥಾನದ ಶಹಾಬುದ್ದೀನ್ ಎಂಬ ತಹ್‌ರೀಕ್ ಜದೀದ್ ಇನ್‌ಸ್ಪೆಕ್ಟರ್ ಹೀಗೆ ಬರೆಯುತ್ತಾರೆ: ಜಡ್‌ಚರ್ಲ ಜಮಾಅತಿನ ಒಬ್ಬರು ಆರ್ಥಿಕ ಬಲಿದಾನ ನೀಡುವವರಲ್ಲಿ ಬಹಳ ಮುಂದಾಗಿದ್ದರು. ಅವರ ವ್ಯವಹಾರ ಕೆಟ್ಟುಹೋದ ಕಾರಣ ಗಾಬರಿಗೊಂಡಿದ್ದರು. ಚಂದವನ್ನು ಸರಿಯಾಗಿ ಪಾವತಿಸಲು ತನಗೆ ಸಾಧ್ಯವಾಗುವಂತೆ ಪ್ರಾರ್ಥಿಸಬೇಕೆಂದು ನನ್ನೊಂದಿಗೆ ಹೇಳುತ್ತಿದ್ದರು. ಒಂದು ದಿನ ರಾತ್ರಿ ಅವರ ಫೋನ್ ಬಂತು "ನಿಮ್ಮನ್ನು ಈಗಲೇ ಕಾಣಬೇಕು" ಎಂದು ಅವರು ಹೇಳಿದರು. ನಾನು ಹೇಳಿದೆ– ನೀವು ಅಲ್ಲಾಹನ ಮೇಲೆ ಭರವಸೆ ಇಡಿರಿ. ಎರಡು ರಕ್‌ಅತ್ ನಮಾಝ್ ಮಾಡಿ ಮಲಗಿರಿ ಎಂದು. ಸ್ವಲ್ಪ ಸಮಯದ ನಂತರ ಪುನಃ ಫೋನ್ ಬಂತು. "ನನಗೋಸ್ಕರ ಸ್ವಲ್ಪ ಸಮಯ ನಿದ್ರಿಸದೆ ನನ್ನನ್ನು ಕಾಯುತ್ತಾ ಇರಿ, ನಾನು ನಿಮ್ಮಲ್ಲಿಗೆ ಬರುತ್ತಿದ್ದೇನೆ" ಎಂದು. ಅವರು ಬಂದಾಗ ಅವರ ಕೈಯಲ್ಲಿ ದೊಡ್ಡ ಸಂಖ್ಯೆಯ ಹಣವಿದ್ದಿತು. ಅವರು ಹೇಳಿದರು: ನಾನು ಪ್ರಾರ್ಥಿಸುತ್ತಾ ಇದ್ದಾಗ ನನಗೊಂದು ಫೋನ್ ಬಂತು. ಒಬ್ಬ ದೊಡ್ಡ ವ್ಯಾಪಾರಿ ನನಗೆ ಬಹಳ ದೊಡ್ಡದಾದೊಂದು ಸಂಖ್ಯೆ ಹಣ ನೀಡಲಿಕ್ಕಿತ್ತು. ಅದು ನನಗೆ ಸಿಗುವ ಪ್ರತೀಕ್ಷೆ ಇರಲಿಲ್ಲ. ಆ ವ್ಯಾಪಾರಿ ಫೋನ್‌ನಲ್ಲಿ ಹೇಳಿದರು: ನೀವು ಬಂದು ಹಣವನ್ನು ತೆಗೆದುಕೊಂಡು ಹೋಗಿರಿ ಎಂದು. ಅವರು ಹೇಳುತ್ತಾರೆ– 'ನಾನು ಚಂದ ಕೊಡುವ ಸಂಕಲ್ಪ ಮಾಡಿದ್ದ ಕಾರಣ ಅಲ್ಲಾಹನು ತಕ್ಷಣ ಈ ರೀತಿ ಅನುಗ್ರಹ ನೀಡಿದನು'.

ಖಾದಿಯಾನಿನ ನಾಯಿಬ್ ವಕೀಲುಲ್ ಮಾಲ್ ತಹ್‌ರೀಕ್ ಜದೀದ್ ಬಶೀರುದ್ದೀನ್ ಸಾಹೇಬರು ಹೇಳುತ್ತಾರೆ: ಒಬ್ಬ ಅಹ್ಮದಿ ತನ್ನ ವಾಗ್ದಾನವನ್ನು ಎರಡೂವರೆ ಪಟ್ಟು ಹೆಚ್ಚು ಮಾಡಿದ್ದರು. ಅನಂತರ ಅವರು ತಹ್‌ರೀಕ್ ಜದೀದ್ ಸೆಕ್ರಟರಿಗೆ ಫೋನ್ ಮಾಡಿ ಹೇಳಿದರು: ನಾನು ಮಸ್‌ಜಿದ್‌ನಿಂದ ಹೊರಗೆ ಬಂದ ಕೂಡಲೆ ನನ್ನ ವ್ಯಾಪಾರದಲ್ಲಿ ಇನ್ನಷ್ಟು ಲಾಭ ದೊರೆತ ಬಗ್ಗೆ ತಿಳಿಯಿತು. ಇದು ಅಲ್ಲಾಹನ ಅನುಗ್ರಹ ಮತ್ತು ತಹ್‌ರೀಕ್ ಜದೀದ್‌ನ ಕಾರಣದಿಂದಾಗಿದೆ. ಆದುದರಿಂದ ಹೊಸದಾಗಿ ಮಾಡಿದ ವಾಗ್ದಾನವನ್ನು ಇಮ್ಮಡಿಗೊಳಿಸುತ್ತೇನೆ.

ಅವರು ಮೊದಲೇ ತನ್ನ ವಾಗ್ದಾನ ಎರಡೂವರೆ ಪಟ್ಟು ಹೆಚ್ಚಿಸಿದ್ದರು. ನಂತರ ಅವರು ಅದನ್ನು ಇಮ್ಮಡಿಗೊಳಿಸಿದರು. ಅವರು ಅಲ್ಲಾಹನ ಅನುಗ್ರಹದಿಂದ ತನ್ನ ವಾಗ್ದಾನದ ಚಂದ ಪಾವತಿಸಿಯೂ ಆಗಿದೆ.

ಕೇರಳದ ಒಬ್ಬ ಮುರಬ್ಬಿ ಸಾಹಿಬ್ ಹೀಗೆ ಬರೆದಿದ್ದಾರೆ: ಒಬ್ಬ ನಿಷ್ಠಾವಂತ ಅಹ್ಮದಿ ತನ್ನ ತಹ್‌ರೀಕ್ ಜದೀದ್ ಚಂದ ಎರಡು ಪಟ್ಟು ಹೆಚ್ಚು ಮಾಡಿ ಪಾವತಿಸಿದ್ದರು. ಈ ವರ್ಷ ಸಹ ಅವರು ಅಸಾಧಾರಣವಾಗಿ ವರ್ಧಿಸಿ ಚಂದ ನೀಡಿದರು. ಈ ವ್ಯಕ್ತಿ ಏಳು ವರ್ಷಗಳ ಹಿಂದೆ ಮೂವತ್ತು ಸಾವಿರ ರೂಪಾಯಿ ಭಂಡವಾಳ ಹೂಡಿ ಮೂರು ಕಾರ್ಮಿಕರೊಂದಿಗೆ ಕೆಲಸ ಪ್ರಾರಂಭಿಸಿದ್ದರು. ಈಗ ಅವರಿಗೆ ಅಲ್ಲಾಹನ ಅನುಗ್ರಹದಿಂದ ಭಾರತ, ದುಬೈ, ಮತ್ತು ಇಂಡೋನೇಶಿಯಾಗಳಲ್ಲಿ ಎಂಟು ರಬ್ಬರ್ ಉಡ್ ಫರ್ನಿಚರ್ ಫ್ಯಾಕ್ಟರಿಗಳಿವೆ. ಐನೂರಕ್ಕಿಂತ ಹೆಚ್ಚು ಜನರು ಕೆಲಸ ಮಾಡುತ್ತಿದ್ದಾರೆ. ಈ ಅಭಿವೃದ್ಧಿ ನಿಶ್ಚಿತ ದರದಲ್ಲಿ ಚಂದ ಕೊಟ್ಟ ಕಾರಣದಿಂದ ಎಂದು ಅವರು ಹೇಳುತ್ತಾರೆ. ಅವರು ಹೇಳುತ್ತಾರೆ: ನಾನು ಚಂದ ನೀಡಿದ ದಿನ ಸಂಜೆಯೊಳಗೆ ನನಗೆ ಹೆಚ್ಚು ಹಣ ಅಲ್ಲಾಹನು ನೀಡುತ್ತಾನೆ. ನಾನು ಆರ್ಥಿಕ ಕಷ್ಟಕ್ಕೆ ಎಂದೂ ಪಾತ್ರನಾಗಲಿಲ್ಲ.

ಲಾಹೋರಿನ ಅಮೀರ್ ಸಾಹೇಬರು ಬರೆಯುತ್ತಾರೆ: ನಮ್ಮ ಮಹಿಳೆಯರು ಸಹ ಬಲಿದಾನ ನೀಡುವುದರಲ್ಲಿ ಬಹಳ ಮುಂದಿದ್ದಾರೆ. ಒಬ್ಬ ಮಹಿಳೆ ತನ್ನ ಚಿನ್ನದ ಕಿವಿಯಾಭರಣ ತಹ್‌ರೀಕ್ ಜದೀದ್ ಚಂದವಾಗಿ ಕೊಟ್ಟರು. ಅವರಿಗೆ ಸಾಂಪತ್ತಿಕ ಅಭಿವೃದ್ಧಿ ಸಿಗಲಿ. ಅಲ್ಲಾಹನು ಅವರ ತ್ಯಾಗವನ್ನು ಸ್ವೀಕರಿಸಲಿ.

ಜರ್ಮನಿಯ ತಹ್‌ರೀಕ್ ಜದೀದ್‌ನ ನೇಶನಲ್ ಸೆಕ್ರಟರಿ ಬರೆಯುತ್ತಾರೆ: ಸಾಲಗಾರನಾಗಿದ್ದ ಒಬ್ಬರು ತಹ್‌ರೀಕ್ ಜದೀದ್ ಚಂದ ಬರೆಸಿದರು. ಅಲ್ಲಾಹನು ಅವರಿಗೆ ಎಷ್ಟು ಅನುಗ್ರಹ ನೀಡಿದನೆಂದರೆ ಅವರು ಸಾಲವನ್ನೆಲ್ಲಾ ಮರುಪಾವತಿ ಮಾಡಿದರು. ಅವರಿಗೆ ಹೊಸ ಮನೆಯನ್ನು ಸಹ ಖರೀದಿಸಲು ಸಾಧ್ಯವಾಯಿತು. ಬಾಹ್ಯವಾಗಿ ನೋಡಿದರೆ ಅದು ಅವರಿಗೆ ಸಾಧ್ಯವಾಗುವುದಾಗಿರಲಿಲ್ಲ.

ಸ್ವಿಟ್ಜರ್‌ಲೇಂಡಿನ ಇನ್‌ಚಾರ್ಜ್ ಮುಬಲ್ಲಿಗ್ ಸಾಹೇಬರು ಬರೆಯುತ್ತಾರೆ: ಬೀತಮ್ ಸಾಹೇಬರು ಮೆಸಿಡೋನಿಯಾ ಮೂಲದ ಸ್ವಿಸ್ ನಾಗರಿಕರಾಗಿದ್ದಾರೆ. ಅವರು ಕಳೆದ ವರ್ಷ ಅಕ್ಟೋಬರ್‌ನಲ್ಲಿ ಬೈಅತ್ ಮಾಡಿದರು. ತಹ್‌ರೀಕ್ ಜದೀದ್ ವರ್ಷ ಮುಗಿಯಲು ಐದು ದಿನಗಳು ಮಾತ್ರ ಬಾಕಿಯಾಗಿದ್ದುವು. ಅವರು ಒಂದು ಸಾವಿರ ಸ್ವಿಸ್ ಫ್ರಾಂಕ್ ತಹ್‌ರೀಕ್ ಜದೀದ್ ಚಂದ ನೀಡಿದರು. ಮುಂದಿನ ವರ್ಷದ ವಾಗ್ದಾನ ಸಹ ಒಂದು ಸಾವಿರ ಫ್ರಾಂಕ್ ಬರೆಸಿದರು. ಅವರಿಗೆ ಧನ ತ್ಯಾಗದ ಮಹತ್ವದ ಬಗ್ಗೆ ತಿಳಿದಾಗ ಅವರು ತನ್ನ ವಾಗ್ದಾನವನ್ನು ಇಮ್ಮಡಿಗೊಳಿಸಿದರು. ಅದರೊಂದಿಗೆ ವಕ್ಫೇ ಜದೀದ್ ಚಂದ ಸಹ ಎರಡು ಸಾವಿರ ಫ್ರಾಂಕ್ ಬರೆಸಿದರು. ಅವರು ಕೆಲಸ ಮಾಡುವ ಕಂಪೆನಿಯವರು ಅವರಿಗೆ ಒಂದು ತರಬೇತಿ ನೀಡುವ ವ್ಯವಸ್ಥೆ ಮಾಡಿದರು. ಅದು ಬಹಳ ಹೆಚ್ಚು ಮೌಲ್ಯದ ತರಬೇತಿಯಾಗಿದೆ. ಅನುಭವಿ ಮತ್ತು 35 ವರ್ಷಕ್ಕಿಂತ ಹೆಚ್ಚು ಪ್ರಾಯದವರು ಅದರಲ್ಲಿ ಸೇರಬಹುದಾಗಿತ್ತು. ನನ್ನ ಪ್ರಾಯ 32 ವರ್ಷವಾಗಿದ್ದರೂ ನನ್ನನ್ನು ಈ ತರಬೇತಿಗೆ ಆಯ್ಕೆ ಮಾಡಲಾಯಿತು. ನಾನು ಇದರ ಬಗ್ಗೆ ಯೋಚಿಸಿರಲಿಲ್ಲ. ಇದು ನನಗೆ ದೊರೆತುದುದು ನನ್ನ ಸಾಂಪತ್ತಿಕ ತ್ಯಾಗದ ಕಾರಣ ಅಲ್ಲಾಹನ ಅನುಗ್ರಹದ ಮೂಲಕವಾಗಿದೆ.

ಈ ರೀತಿ ಹೊಸದಾಗಿ ಬೈಅತ್ ಮಾಡುವ ಯುರೋಪಿನ ಜನರಿಗೆ ಅಲ್ಲಾಹನು ತನ್ನ ಅಸ್ತಿತ್ವದ ಸಾಕ್ಷ್ಯ ನೀಡುತ್ತಾನೆ. ಮೆಸಿಡೋನಿಯನ್ ಮೂಲದ ಒಬ್ಬ ಸ್ವಿಸ್ ಅಹ್ಮದಿ ಬೇಕ್‌ಬಮ್ ಸಾಹೇಬ್ ಹೇಳುತ್ತಾರೆ: ನಾನು ಕೆಲಸ ಮಾಡುವ ಕಂಪೆನಿಯ ಮಾಲಿಕ ಬಹಳ ಜಿಪುಣನಾಗಿದ್ದಾನೆ. ಸಂಕುಚಿತ ಹೃದಯಿ ಆಗಿದ್ದಾನೆ. ಅವನು ಯಾವುದೇ ಬಾಹ್ಯ ಕಾರಣವಿಲ್ಲದೆ ನನ್ನ ಸಂಬಳ ವರ್ಧಿಸಿದನು. ಇದು ಕೇವಲ ನನ್ನ ಸಾಂಪತ್ತಿಕ ತ್ಯಾಗದ ಫಲವಾಗಿ ಎಂದು ನಾನು ಭಾವಿಸುತ್ತೇನೆ.

ಲಂಡನ್ ನಗರದ ರೀಜನಲ್ ಅಮೀರ್ ನಸೀರುದ್ದೀನ್ ಸಾಹೇಬ್ ಒಂದು ಸಂಭವ ಹೀಗೆ ವಿವರಿಸುತ್ತಾರೆ: ಒಬ್ಬ ಅಹ್ಮದಿ ಹೀಗೆ ಪ್ರಾರ್ಥಿಸಿದರು– ತಹ್‌ರೀಕ್ ಜದೀದ್ ಚಂದ ನೀಡಲು ನನಗೆ ಸಹಾಯ ಮಾಡು. ಅಲ್ಲಾಹನು ನನ್ನ ಹೃದಯದಲ್ಲಿ ಹೀಗೆ ಯೋಚನೆ ಸ್ಫುರಿಸಿದನು. ಆಫೀಸಿಗೆ ಟ್ರೈನ್‌ನಲ್ಲಿ ಹೋಗುವುದಕ್ಕೆ ಬದಲಾಗಿ ಕಂಪೆನಿಯ ಬಸ್‌ನಲ್ಲಿ ಉಚಿತವಾಗಿ ಪ್ರಯಾಣಿಸಬೇಕೆಂದು. ಈ ರೀತಿ ಪ್ರತಿದಿನ ಎರಡು ಪೌಂಡ್ ಉಳಿಸಿದೆ. ವರ್ಷವಿಡೀ ಹೀಗೆ ಮಾಡಿ ನಾಲ್ಕು ನೂರು ಪೌಂಡ್ ಉಳಿತಾಯ ಮಾಡಿ ತಹ್‌ರೀಕ್ ಜದೀದ್ ಚಂದವಾಗಿ ನೀಡಿದೆ.

ಕೆಲವು ಜನರು ಹೀಗೆ ಸಹ ಯೋಚಿಸುತ್ತಾರೆ. ಇಲ್ಲಿ ಲಂಡನ್‌ನಲ್ಲಿ ಒಬ್ಬ ವ್ಯಕ್ತಿಯ ಮನೆಯಲ್ಲಿ ಡಕಾಯಿತಿ ನಡೆಯಿತು. ಎಲ್ಲಾ ಸಾಮಾಗ್ರಿಗಳನ್ನು ಕದ್ದೊಯ್ದರು. ಆದರೆ ತಹ್‌ರೀಕ್ ಜದೀದ್‌ಗೋಸ್ಕರ ತೆಗೆದಿರಿಸಿದ ಒಂದು ಸಾವಿರ ಪೌಂಡ್ ಸುರಕ್ಷಿತವಾಗಿತ್ತು.

ಆಸ್ಟ್ರೇಲಿಯಾದ ಮುಬಲ್ಲಿಗ್ ಇನ್‌ಚಾರ್ಜ್ ಬರೆಯುತ್ತಾರೆ: ಖುದ್ದಾಮುಲ್ ಅಹ್ಮದಿಯಾದ ಇಜ್ತಿಮಾದಲ್ಲಿ ನಾನು ತಹ್‌ರೀಕ್ ಜದೀದ್ ಚಂದದ ಬಗ್ಗೆ ಗಮನ ಹರಿಸಿದೆ. ಅಲ್ಲಿ ಖುದ್ದಾಮ್ ಮತ್ತು ಅತ್‌ಫಾಲ್‌ಗೆ ವೌಚರ್(VOUCHER) ಮೂಲಕ ಬಹುಮಾನ ನೀಡಲಾಗಿತ್ತು. ಅಲ್ಲಿ ಮೂವರು ಬಾಲಕರಾದ ಅರ್‌ಸಲಾನ್, ಆತಿಫ್ ಮತ್ತು

ಕಾಮ್‌ರಾನ್ ಎಂಬವರಿಗೆ 89 ಡಾಲರ್ ಬಹುಮಾನ ಲಭಿಸಿತ್ತು. ಈ ಬಾಲಕರು ತಮ್ಮ ಕಡೆಯಿಂದ ಹನ್ನೊಂದು ಡಾಲರ್ ಸೇರಿಸಿ ಒಂದು ನೂರು ಡಾಲರ್ ತಹ್‌ರೀಕ್ ಜದೀದ್‌ಗೆ ಚಂದಾ ನೀಡಿದರು.

ನಾನು ಕೆಲವೇ ಘಟನೆಗಳನ್ನು ವಿವರಿಸಿದ್ದೇನೆ. ಅನೇಕ ಘಟನೆಗಳಿಂದ ಇವುಗಳನ್ನು ಆಯ್ಕೆಮಾಡಿ ಹೇಳಿದ್ದೇನೆ. ಹಳೆಯ ಅಹ್ಮದಿಯರು ಮಾತ್ರವಲ್ಲ ಹೊಸ ಅಹ್ಮದಿಯರೂ ಯುರೋಪಿನಲ್ಲೂ ಆಫ್ರಿಕದಲ್ಲೂ ಸಾಂಪತ್ತಿಕ ತ್ಯಾಗ ಮಾಡುತ್ತಿದ್ದಾರೆ. ಮಹಿಳೆಯರೂ ಮಕ್ಕಳೂ ಆಶ್ಚರ್ಯಕರವಾದ ರೀತಿಯಲ್ಲಿ ತ್ಯಾಗ ಮಾಡುತ್ತಾ ಇದ್ದಾರೆ.

ನಮಗೆಲ್ಲ ತಿಳಿದಿರುವಂತೆ ತಹ್‌ರೀಕ್ ಜದೀದ್ ವರ್ಷ ನವೆಂಬರ್‌ನಲ್ಲಿ ಪ್ರಾರಂಭವಾಗುತ್ತದೆ. ಈಗ ನಾನು ಕಳೆದ ವರ್ಷದ ವರದಿ ನೀಡಿ ಹೊಸ ವರ್ಷದ ಆರಂಭದ ಪ್ರಕಟಣೆ ನೀಡುತ್ತೇನೆ. ಕಳೆದ ವರ್ಷ 80ನೇ ವರ್ಷವಾಗಿತ್ತು. ಅದು 2014 ಅಕ್ಟೋಬರ್ 31ಕ್ಕೆ ಮುಕ್ತಾಯವಾಯಿತು. ವರದಿಗಳ ಪ್ರಕಾರ ಕಳೆದ ವರ್ಷ, 84 ಲಕ್ಷ ಎಪ್ಪತ್ತು ಸಾವಿರದ ಎಂಟು ನೂರು ಪೌಂಡ್ ಚಂದ ಲಭಿಸಿತು. **ಅಲ್‌ಹಂದುಲಿಲ್ಲಾಹ್.** ಇದು ಅದರ ಮೊದಲಿನ ವರ್ಷಕ್ಕಿಂತ ಆರು ಲಕ್ಷ ಒಂದು ಸಾವಿರ ಪೌಂಡ್‌ನಷ್ಟು ಹೆಚ್ಚಾಗಿದೆ. ಪಾಕಿಸ್ಥಾನದ ಸ್ಥಿತಿ ಕೆಟ್ಟದ್ದರೂ ಅದು ಪ್ರಥಮ ಸ್ಥಾನದಲ್ಲಿಯೇ ಇದೆ. ಪಾಕಿಸ್ಥಾನದ ಹೊರಗಿನ ಹತ್ತು ಜಮಾಅತ್‌ಗಳು ಇವುಗಳಾಗಿವೆ. ಜರ್ಮನಿ ಪ್ರಥಮ ಸ್ಥಾನದಲ್ಲಿದೆ. ಬ್ರಿಟನ್ ದ್ವಿತೀಯ ಸ್ಥಾನ. ಅವರು ಅದರ ಹಿಂದಿನ ವರ್ಷ ತೃತೀಯ ಸ್ಥಾನದಲ್ಲಿದ್ದರು ಈಗ ಮುಂದೆ ಬಂದಿದ್ದಾರೆ. ಅಮೇರಿಕ ತೃತೀಯ ಸ್ಥಾನ, ಕೆನಡ ಚತುರ್ಥ ಸ್ಥಾನ, ಇಂಡಿಯಾ ಐದನೆಯ ಸ್ಥಾನ, ಆಸ್ಟ್ರೇಲಿಯಾ ಆರನೇ ಸ್ಥಾನ, ಇಂಡೋನೇಶಿಯಾ ಏಳನೇ ಸ್ಥಾನ, ಆಸ್ಟ್ರೇಲಿಯ ಒಂದು ಸ್ಥಾನ ಮುಂದೆ ಸಾಗಿತು. ಇಂಡೋನೇಶಿಯಾ ಒಂದು ಸ್ಥಾನ ಹಿಂದೆ ಸರಿದಿದೆ. ಅನಂತರ ಮಧ್ಯ ಪೂರ್ವ ದೇಶಗಳು ಬರುತ್ತವೆ. ಆ ಮೇಲೆ ಸ್ವಿಝರ್‌ಲೇಂಡ್, ಘಾನ, ನೈಜಿರಿಯಾಗಳಿವೆ.

ಆಯಾ ದೇಶದ ಕರೆನ್ಸಿ ಪ್ರಕಾರ ಚಂದ ವಸೂಲಾದುದರಲ್ಲಿ ಉಂಟಾದ ವರ್ಧನೆ ಹೀಗಿವೆ. ಇಂತಹ ಹತ್ತು ಸ್ಥಾನಗಳಲ್ಲಿ ಘಾನ ಒಂದನೆಯ ಸ್ಥಾನದಲ್ಲಿದೆ. ಅಲ್ಲಿ ಶೇಕಡಾ 50ರಷ್ಟು ವರ್ಧನೆಯಾಗಿದೆ. ಎರಡನೆಯ ಸ್ಥಾನ ಆಸ್ಟ್ರೇಲಿಯಾ 44% ವರ್ಧನೆ, ಮೂರನೆಯ ಸ್ಥಾನ ಮಧ್ಯಪೂರ್ವ ದೇಶಗಳು 17% ವರ್ಧನೆ, ಸ್ವಿಝರ್‌ಲೇಂಡ್ 17%, ಪಾಕಿಸ್ಥಾನ 14%, ಯು.ಕೆ ಯ ಜಮಾಅತ್‌ಗಳು $13^3/_4$%, ನಂತರ ಇಂಡೋನೇಶಿಯಾ; ನಂತರ ಭಾರತ ಮತ್ತು ಜರ್ಮನಿ ಸಮಾನವಾಗಿವೆ. ಕೆನಡ ಹತ್ತನೆ ಸ್ಥಾನದಲ್ಲಿದೆ.

ವ್ಯಕ್ತಿಯೊಬ್ಬನ ಚಂದದ ದೃಷ್ಟಿಯಲ್ಲಿ ಅಮೇರಿಕ ಮೊದಲನೆಯ ಸ್ಥಾನದಲ್ಲಿದೆ. ಸ್ವಿಝರ್‌ಲೇಂಡ್ ಎರಡನೆಯ ಸ್ಥಾನದಲ್ಲಿ, ಆಸ್ಟ್ರೇಲಿಯಾ ಮೂರನೆಯ ಸ್ಥಾನದಲ್ಲಿದೆ.

ತಹ್‌ರೀಕ್ ಜದೀದ್ ಮತ್ತು ವಕ್ಫ್ ಜದೀದ್ ಚಂದ ನೀಡುವವರ ಸಂಖ್ಯೆಯನ್ನು ವರ್ಧಿಸಬೇಕೆಂದು ನಾನು ಕಳೆದ ಕೆಲವು ವರ್ಷಗಳಿಂದ ಹೇಳುತ್ತಾ ಇದ್ದೆನು. ಚಂದದ ಹಣದ ಮೊತ್ತವನ್ನು ಮಾತ್ರ ನೋಡಿದರೆ ಸಾಕಾಗದು ಚಂದ ಕೊಡುವವರ ಸಂಖ್ಯೆ ಸಹ ವರ್ಧಿಸಬೇಕೆಂದು ನಾನು ಹೇಳಿದ್ದೆ. ಅಲ್ಲಾಹನ ಅನುಗ್ರಹದಿಂದ ಈ ವರ್ಷ ಒಟ್ಟಿಗೆ ಹನ್ನೆರಡು ಲಕ್ಷ ಹನ್ನೊಂದು ಸಾವಿರದ ಏಳು ನೂರು ಆಗಿದೆ. ಕಳೆದ ನಾಲ್ಕು ವರ್ಷಗಳಲ್ಲಿ ಆರು ಲಕ್ಷ ವರ್ಧಿಸಿದೆ. ದಫ್ತರ್ ಅವ್ವಲ್‌ನಲ್ಲಿ ಐದು ಸಾವಿರದ ಒಂಬೈನೂರ ಇಪ್ಪತ್ತೇಳು ಜನರಿದ್ದರು. ಅವರ ಪೈಕಿ ಈಗ 105 ಜನರು ಜೀವಿಸಿದ್ದಾರೆ. ಉಳಿದ ಐದು ಸಾವಿರದ ಎಂಟುನೂರ ಇಪ್ಪತ್ತೆರಡು ಜನರ ಖಾತೆಗಳನ್ನು ಅವರ ವಾರೀಸುದಾರರು ಮತ್ತು ಇತರರು ಜಾರಿಯಲ್ಲಿರಿಸಿದ್ದಾರೆ.

ಭಾರತದ ಮೊದಲನೇ ಹತ್ತು ಪ್ರಾಂತ್ಯಗಳಲ್ಲಿ ಪ್ರಥಮ ಸ್ಥಾನ ಕೇರಳಕ್ಕೆ ಇದೆ. ಅನಂತರ ಅನುಕ್ರಮವಾಗಿ ತಮಿಳುನಾಡು, ಕರ್ನಾಟಕ, ಆಂಧ್ರಪ್ರದೇಶ, ಜಮ್ಮುಕಾಶ್ಮೀರ, ಒಡಿಶ, ಬಂಗಾಳ, ಪಂಜಾಬು, ದೆಹಲಿ, ಲಕ್ಷದ್ವೀಪ.

ಭಾರತದ ಮೊದಲನೆಯ ಹತ್ತು ಜಮಾಅತ್‌ಗಳಲ್ಲಿ ಪ್ರಥಮ ಸ್ಥಾನ ಕರುಳಾಯಿಗೆ, ಅನಂತರ ಅನುಕ್ರಮವಾಗಿ ಕೋಝಿಕ್ಕೋಡ್, ಹೈದರಾಬಾದ್, ಖಾದಿಯಾನ್, ಕಣ್ಣೂರ್ ಟೌನ್, ಪಯಂಗಾಡಿ, ಸೋರೋ, ಕೊಲ್ಕತ್ತ, ಚೆನ್ನೈ, ಬೆಂಗಳೂರು.

ಅಲ್ಲಾಹನು ಎಲ್ಲರ ತ್ಯಾಗಗಳನ್ನು ಸ್ವೀಕರಿಸುವಂತಾಗಲಿ. ಅವರ ಸಂಪತ್ತಿನಲ್ಲಿ ಮತ್ತು ಅವರ ಸಂಖ್ಯೆಯಲ್ಲೂ ವರ್ಧನೆ ಉಂಟಾಗಲಿ. ಜಮಾಅತಿನ ಆಡಳಿತ ವ್ಯವಸ್ಥೆಗೂ ಸಹ ಚಂದದ ಹಣವನ್ನು ಸರಿಯಾದ ರೀತಿಯಲ್ಲಿ ಖರ್ಚು ಮಾಡಲು ಅಲ್ಲಾಹನು ತೌಫೀಕ್ ನೀಡಲಿ- ಆಮೀನ್.

ಒಂದು ಜನಾಝ ಗಾಯಿಬ್ ಇದೆ. ಮುಬಲ್ಲಿಗ್ ಅಲ್‌ಹಾಜ್ ಯೂಸುಫ್ ಸಾಹೇಬರು ಘಾನದಲ್ಲಿ ನವೆಂಬರ್ 2ರಂದು ನಿಧನ ಹೊಂದಿದ್ದರು. إِنَّا لِلّٰهِ وَإِنَّا إِلَيْهِ رَاجِعُونَ ಅವರು ಕ್ರೈಸ್ತ ಮತದಿಂದ ಮುಸ್ಲಿಮರಾದರು. ಅವರು ಘಾನದ ಜಾಮಿಅದಲ್ಲಿ ಕಲಿತು ಮುಬಲ್ಲಿಗರಾದರು.

---------------*****--------------

*Friday Sermon delivered by Hadrath Khaleefatul Masih Al Khamis(atba)*
*at Masjid Baithul Futhuh, London on 07-11-2014.*
Summarized by *Majlis Ansarullah Bharat*
***Kannada Translation:*** M. Ubeidullah for Kannada Desk, Qadian
***Reviewed by:*** M P Ibrahim | ***Typing:*** U Basheer Ahmad
*Published By:* **Kannada Isha'at Team** for **Nazarath Nashr-O-Isha'ath, Qadian**
***Email**: khutuba.kannada@gmail.com*